ಕಟ್ಟಕಡೆಯ ಮಗುವನ್ನೂ ಶಾಲೆಗೆ ಕರೆತರುವುದು

ಶಿವಾನಿ ತನೇಜಾ

ನಾನು 1997ರಲ್ಲಿ ವೃತ್ತಿ ಆರಂಭಿಸಿದಾಗ ಸಮಾನಾವಕಾಶದ ಜಗತ್ತಿನ ದೃಷ್ಟಿಕೋನದ ಮುಖ್ಯ ಕೊಂಡಿ ಎಂಬ ಆಶಯದಿಂದ, ಪ್ರತಿ ಮಗುವೂ ಶಾಲೆಯಲ್ಲಿ ಇರುವಂತಾಗಬೇಕು ಎಂಬ ಒಂದು ಕನಸನ್ನು ಕಟ್ಟಿಕೊಂಡಿದ್ದೆ. ಈ ಹಾದಿಯಲ್ಲೇ ನಮ್ಮಲ್ಲಿ ಬಹುತೇಕರು ಕಾರ್ಯಪ್ರವೃತ್ತರಾಗಿದ್ದರೆಂದು ನಾನು ನಂಬಿದ್ದೇನೆ. ರಾಜ್ಯವೇ ಆಗಲಿ, ಸಮುದಾಯಗಳು, ಪೋಷಕರು ಹೀಗೆ ನಾವು ಎಲ್ಲಾ ಹಿರಿಯರು, ಶಾಲೆಗೆ ತೆರಳುವುದು ಅತ್ಯಗತ್ಯ ಮತ್ತು ಉಪಯುಕ್ತವಾದ ಸಂಗತಿ ಎಂದು ಸ್ವತಃ ನಂಬಿದ್ದೇವೆ / ಕ್ರಿಯಾಶೀಲರಾಗಿದ್ದೇವೆ. ಆದರೆ ನಾವು ಬಾಲಕರಿಂದ ತೊಡಗಿ ವಿಮರ್ಶಾತ್ಮಕವಾಗಿ ಯೋಚಿಸುವ ವಯಸ್ಕರಾಗಿ ಬೆಳೆಯುತ್ತಾ ಹೋದಂತೆ, (ನಮ್ಮ ಸ್ವಂತ ಶಾಲಾ ಶಿಕ್ಷಣದಲ್ಲಿ ಇದು ಸಾಧ್ಯವಾಗದಿರಬಹುದು!) ಇದು ಸತ್ಯಕ್ಕೆ ತುಂಬಾ ದೂರವಾದ ಸಂಗತಿ ಎಂಬುದು ಅರಿವಾಗುತ್ತದೆ.

ತರಗತಿ ವ್ಯವಸ್ಥೆಯ ಹೊರಗೂ ಪರಿಶೀಲಿಸಬೇಕಾದ ಕೆಲವು ಪ್ರಶ್ನೆಗಳು ತಲೆದೋರುತ್ತವೆ: ಕೈಗಾರಿಕೀಕೃತ ಜಗತ್ತು ಮತ್ತು ಆಧುನಿಕ ನಾಗರೀಕತೆಯೊಂದಿಗೆ ವ್ಯವಹರಿಸಲು ಶಿಕ್ಷಣವು ಕೇವಲ ಒಂದು ಸಾಧನವೇ? ಅದರಿಂದ ಲಿಂಗ, ಧರ್ಮ, ಜಾತಿ, ವರ್ಗವನ್ನು ಮೀರಿ ಒಂದು ಬಗೆಯ ಸಮಾನತೆಯನ್ನು ಕಲಿಯಬಲ್ಲೆವೆ? ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ಬೆಳೆಸಿಕೊಳ್ಳುತ್ತಿದ್ದೇವೆಯೇ ಅಥವಾ ಈ ವ್ಯವಸ್ಥೆಯ ಮೂಲಕ ನಿಜಕ್ಕೂ ವಿರುದ್ಧವಾಗಿ ನಡೆದು-ಕೊಳ್ಳುತ್ತಿದ್ದೇವೆಯೇ? ಈ ಶಿಕ್ಷಣವು ಸುಸ್ಥಿರ ಜಗತ್ತನ್ನು ಕಟ್ಟಬಲ್ಲುದೇ?ಯಾವಾಗ ನಾವು ಈ ವ್ಯವಸ್ಥೆಯ ಉತ್ಪನ್ನಗಳು ಎಷ್ಟು ಸಮರ್ಥ ಎಂದು ಯೋಚಿಸಲಾರಂಭಿಸುತ್ತೇವೋ, ನಾಗರೀಕ ಎಂದು ಕರೆಯುವಂಥ ಜಗತ್ತು ಕಾರ್ಯನಿರ್ವಹಿಸುವಂತೆ ನೋಡಲಾರಂಭಿಸುತ್ತೇವೋ ಆಗ ಈ ಪ್ರಶ್ನೆಗಳು, ಸಂಶಯಗಳು ಎದ್ದೇಳುತ್ತವೆ. ಇಷ್ಟಾದರೂ, ಇಂತಹ ಪರಿಸ್ಥಿತಿಯಲ್ಲಿಯೂ, ತರಗತಿ ಎಂಬ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಾದ ನಾವು, ಪ್ರತಿ ದಿನ ಭೇಟಿಯಾಗುವ ಮಕ್ಕಳಿಗಾಗಿ ವ್ಯವಸ್ಥೆಯೊಳಗೆ ಬದಲಾವಣೆ ತರಲು ಅಗಾಧ ಸಾಮರ್ಥ್ಯವನ್ನು ಕಂಡುಕೊಳ್ಳಬಹುದು.

ಕೆಲವು ಅವಶ್ಯಕತೆಗಳು: ಪ್ರೀತಿ ಮತ್ತು ಮಮತೆ

ಪರಸ್ಪರ ಆತ್ಮೀಯತೆ ಇದ್ದರೆ ಮಾತ್ರ ಯಾವುದೇ ಇಬ್ಬರು ವ್ಯಕ್ತಿಗಳ ನಡುವಿನ ಮಾತುಕತೆ ಧನಾತ್ಮಕವಾಗಿ ಮತ್ತು ಇಬ್ಬರಿಗೂ ಅನುಭವ ಗಳಿಸುವಂತಿರಲು ಸಾಧ್ಯ. ಸಮುದಾಯ ಮತ್ತು ತಮ್ಮ ಕುಟುಂಬದ ಸಣ್ಣ ವರ್ತುಲದೊಳಗೆ ಮಾತ್ರ ಅಲಕ್ಷಿತ ಸಮುದಾಯದ ಮಕ್ಕಳಿಗೆ ಪ್ರೀತಿ ಸಿಕ್ಕೀತು ಮತ್ತು ಅವರಲ್ಲಿ ನಗುವನ್ನು ಕಾಣಲು ಸಾಧ್ಯ. ರಸ್ತೆಯಲ್ಲಾಗಲೀ, ಅಂಗಡಿಗಳಲ್ಲಾಗಲೀ ಈ ಮಕ್ಕಳೊಂದಿಗೆ ಯಾರೂ ನಗುವುದಿಲ್ಲ. ಭೇದಭಾವ ತೋರಲು ಅವರ ಬಣ್ಣ, ವರ್ಗ, ಧರ್ಮ ಅಥವಾ ಸಮುದಾಯ, ಒಟ್ಟಾರೆ ಅವರ ಚೆಹರೆಯೇ ಸಾಕು. ಹಾಗಾಗಿ, ಒಬ್ಬ ಶಿಕ್ಷಕ/ಕಿಯಾಗಿ, ಯಾವಾಗ ಮಕ್ಕಳನ್ನು ಒಂದು ಪ್ರೀತಿಯ ನಗು ಅಥವಾ ಆಲಿಂಗನದೊಂದಿಗೆ ಸ್ವಾಗತಿಸಿದರೆ, ನೀವು ಕಾಳಜಿ ತೋರಿಸುತ್ತೀರಿ ಎಂದು ಅವರು ತಿಳಿದುಕೊಳ್ಳುತ್ತಾರೆ. ಅವರು ತಮ್ಮ ಸಮುದಾಯದ ಗುಂಪಿನಿಂದ ಆಚೆಗೂ ಒಂದು ಗುರುತಿಸುವಿಕೆಯನ್ನು ಕಂಡುಕೊಳ್ಳುತ್ತಾರೆ. ಈ ಪ್ರಯತ್ನ ಕಾರ್ಯತಂತ್ರವೆಂದಷ್ಟೇ ಅಲ್ಲ, ಜೊತೆಯಲ್ಲಿ ಕೆಲಸ ಮಾಡುವ ಮಕ್ಕಳನ್ನು ನಾವು ಪ್ರೀತಿಸಿದರೆ ಸಿಗುವ ಸ್ವಯಂಪ್ರೇರಿತ ಸ್ಪಂದನವೂ ಹೌದು. ಔಪಚಾರಿಕವಾದ ಗುಡ್‌ಮಾರ್ನಿಂಗ್ ಮೇಡಂ ಎಂಬುದಕ್ಕಿಂತಲೂ, ಒಂದು ನಗು ಅಥವಾ ಒಂದು ಶುಭಾಶಯದಂತಹ ಸರಳವಾದ ಆದರಿಸುವ ಸಂಕೇತದಿಂದ ದೊಡ್ಡ ಪವಾಡವೇ ನಡೆದುಹೋಗುತ್ತದೆ. ತಮ್ಮಿಂದಾಗಿ ಜಗತ್ತು ಹೆಚ್ಚು ಸುಂದರವಾಗಿದೆ ಎಂದು ಮಕ್ಕಳು ಅರ್ಥ ಮಾಡಿಕೊಳ್ಳಲು ಆರಂಭಿಸುತ್ತಾರೆ. ಶಾಲೆಯು, ತಾವು ಯಾರು, ತಮಗೇನು ಬೇಕಾಗಿತ್ತೋ ಅದನ್ನು ಪಡೆಯುವ ಸ್ಥಳವಾಗುತ್ತದೆ.

ಗೌರವ ಮತ್ತು ಘನತೆ

ಮುಖ್ಯವಾಹಿನಿಯ ಸಂಸ್ಕೃತಿಯಲ್ಲಿ, ಅಲಕ್ಷಿತ ಸಮುದಾಯದ ಮಕ್ಕಳ ಭಾಷೆ ಮತ್ತು ಬದುಕು ಅವರಿಗೆ ಅರ್ಹವಾದಷ್ಟು ಅಂತಸ್ತನ್ನು ಕೊಟ್ಟಿರುವುದಿಲ್ಲ. ಅದು ಮಗುವಿನ ಹೆತ್ತವರು ಮಾಡುವ ನೌಕರಿ ಅಥವಾ ಮಗು ಎಲ್ಲಿ ಬದುಕುತ್ತದೆ ಅಥವಾ ಅದು ಆಡುವ ಆಟ-ಪ್ರತಿಯೊಂದೂ ಅವರನ್ನು ಮುಖ್ಯವಾಹಿನಿಯ ಆಕಾಂಕ್ಷೆಗಳಿಗೆ ಕೆಳದರ್ಜೆಯಾಗಿ ಪರಿಗಣಿಸಲ್ಪಟ್ಟು, ಅದರಂತೆ ಉಪಚರಿಸ-ಲಾಗುತ್ತದೆ. ಅವರ ಭಾಷೆಯು ವೃತ್ತಿ ಕ್ಷೇತ್ರದಲ್ಲಿ ಗೌರವ ದಕ್ಕಿಸಿಕೊಡುವಂತಿರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಈ ವ್ಯತ್ಯಾಸಗಳು ಅನೇಕ ವೇಳೆ ಗುರುತುಗಳು ಅಥವಾ ಸಾಮಾಜಿಕವಾಗಿ ಅರ್ಥೈಸಲಾದ ಸಂಕ್ಷಿಪ್ತ ರೂಪಗಳಾಗಿದ್ದು, ಸಾಮಾನ್ಯ ಸಾಮರ್ಥ್ಯದ ಕೊರತೆಯಿಂದಾಗಿ ಹಲವಾರು ಅಲ್ಪ ಮತ್ತು ದೀರ್ಘಕಾಲೀನ ಭೌತಿಕ ಅನುಕೂಲತೆಗಳ ಸೂಚಕಗಳಾಗಿ ಪರಿಗಣಿತವಾಗುತ್ತದೆ. ಈ ಮನೋಭಾವಗಳು, ಗೌರವ ಮತ್ತು ಘನತೆಗೆ ಸಂಬಂಧಿಸಿದ ಹಲವು ಮನೋಶಾಸ್ತ್ರೀಯ ಪ್ರತಿಫಲನವಾಗಿ ಬದಲಾಗಿ ಹೊರಹೊಮ್ಮುತ್ತವೆ.

ಗೌರವ ಮತ್ತು ಪ್ರತಿಷ್ಠೆ ಹಲವು ರೂಪಗಳಲ್ಲಿ ವ್ಯಕ್ತವಾಗುತ್ತಿದ್ದು, ಇತರರ ಭಾಷೆಯನ್ನು ಗುರುತಿಸುವುದು ಮತ್ತು ಗೌರವಿಸುವುದು ಅತ್ಯಂತ ಸರಳ ಕ್ರಮವಾಗಿದೆ. ಹಾಗಾಗಿ ಸಂಸ್ಕೃತಿ, ಜೀವನಶೈಲಿ, ಗುರುತು ಮತ್ತು ತಿಳುವಳಿಕೆಯು ಶ್ರೀಮಂತ ಮತ್ತು ವಿಶಿಷ್ಟವಾದುದು. ಬಹುಭಾಷಾ ಶಿಕ್ಷಣಶಾಸ್ತ್ರದ ಶಕ್ತಿಯ ಬಗ್ಗೆ ಹಲವಾರು ಅಂಶಗಳನ್ನು ಪ್ರಸ್ತಾಪಿಸಬೇಕಾಗುತ್ತದೆ. ಆದರೆ, ಮಗುವಿನ ಸ್ಥಾನಮಾನದಿಂದಲೇ ಮಾತುಕತೆ ಆರಂಭಿಸುವುದು ಮುಖ್ಯ.

ಶಿಕ್ಷಕಿಯಾಗಿ, ಮಗುವಿನ ಮಾತೃಭಾಷೆಯಲ್ಲಿ ಅಷ್ಟೇನೂ ನೈಪುಣ್ಯತೆಯಿಲ್ಲದ ನಾನು, ಅದರ ಭಾಷೆಯಲ್ಲಿ ಒಂದು ವಾಕ್ಯವನ್ನಾದರೂ ಮಾತನಾಡಿದರೆ, ಆಗ ಆ ಮಗುವಿನ ಕಣ್ಣಿನಲ್ಲಿ ವಿಭಿನ್ನವಾದ ಭಾವವನ್ನು ಕಾಣುತ್ತಿರುತ್ತೇನೆ ಅದು, 'ನೀನು ನನ್ನನ್ನು ಗೌರವಿಸು, ನನ್ನೊಂದಿಗೆ ನಿನಗೆ ಮಾತನಾಡಬೇಕಿದೆಯಾ, ನೀನು ನನ್ನನ್ನು ಸಂಪರ್ಕಿಸಲು ಪ್ರಯತ್ನಿಸುತ್ತಿದ್ದೀಯೆ, ನೀನು ನನ್ನ

ಜೀವನದ ಭಾಗ' ಎಂದು ಮಗು ಭಾವಿಸುತ್ತಿದೆಯೇನೋ ಎಂಬಂತಿರುತ್ತದೆ; ಮಗುವಿನ ತಲೆಯಲ್ಲಿ ಏನೆಲ್ಲಾ ಓಡುತ್ತದೋ ನನಗೆ ಗೊತ್ತಿಲ್ಲ. ಆದರೆ ಅದು ನನ್ನನ್ನು ವಿಭಿನ್ನವಾಗಿ ಸ್ವೀಕರಿಸುತ್ತದೆ. ಅಂತಹ ಸಂದರ್ಭಗಳಲ್ಲಿ, ಸಂವಹನ ಮಾಡಲಷ್ಟೇ ಪ್ರಯತ್ನಿಸುತ್ತೇನೆ. ಇಲ್ಲವೇ ತಮಾಷೆ ಮಾಡುತ್ತೇನೆ. ಆದರೆ ಆ ಮಗು ನನ್ನೊಂದಿಗೆ ಮತ್ತೆ ಸಂವಹನ ಮಾಡುತ್ತದೆ ಮತ್ತು ನಾನು ಅದನ್ನು ಸ್ವೀಕರಿಸಿದ ಕಾರಣ ಅದು ನನ್ನನ್ನು ಸ್ವೀಕರಿಸುತ್ತದೆ. ಎಷ್ಟೋ ಸಲ ನಾನು ಮಗುವಿನ ಮಾತೃಭಾಷೆಯ ಯಾವುದಾದರೂ ಒಂದು ವಾಕ್ಯವನ್ನು ಅನುವಾದಿಸಿ ಬರೆದಿಟ್ಟುಕೊಳ್ಳುತ್ತೇನೆ. ಅವರ ಬಳಿ ಹೋದಾಗ ಆ ವಾಕ್ಯವನ್ನು ಬರೆದೋ, ಓದಿಯೋ ಹೇಳಿದಾಗ ಆ ಮಗುವಿನ ಕಣ್ಣುಗಳಲ್ಲಿ ಒಂದು ಮಿಂಚು ಹಾದುಹೋಗುತ್ತದೆ. ಆ ಕ್ಷಣ ಅಲ್ಲಿ ಏನು ನಡೆಯುತ್ತಿದೆ ಎಂದು ನನ್ನತ್ತ ಅವರು ನೋಡುತ್ತಾರೆ. ಅದೊಂದು ಸುಂದರ ಪ್ರತಿಸ್ಪಂದನೆ.

ಮೇಲು–ಕೀಳು ಎಂಬ ತೀರ್ಮಾನಗಳಿಲ್ಲದೆ ಇತರರ ಬದುಕನ್ನು ಅದು ಇರುವಂತೆಯೇ ಸ್ವೀಕರಿಸುವುದರಿಂದಲೂ ಘನತೆ ಮೂಡುತ್ತದೆ. ಹಾಗೆಂದು, ಎಲ್ಲದಕ್ಕೂ ಅವಕಾಶ ನೀಡುವುದು ಅಥವಾ ಸಹಿಸಿಕೊಳ್ಳುವುದು (Allowing or tolerating) ಎಂದರ್ಥವಲ್ಲ. ಬದಲಿಗೆ ಮಕ್ಕಳು ಅವರ ಬದುಕಿನ ಬಗ್ಗೆ ಮಾಹಿತಿ ನೀಡಲು ಉತ್ತೇಜಿಸುವುದಾಗಿದೆ. ಸಂವಾದಗಳು, ಬರವಣಿಗೆ ಮತ್ತು ಇತರ ವಿನಿಮಯ ಮಾರ್ಗಗಳ ಮೂಲಕ ಅವರ ಬದುಕನ್ನು ತರಗತಿಯೊಳಗೆ ತರಬಹುದು ಮತ್ತು ತರಲೇಬೇಕು, ಅದಕ್ಕೆ ಯಾರೂ ಅಪಹಾಸ್ಯ ಮಾಡುವಂತಿಲ್ಲ ಎಂಬ ಸ್ಪಷ್ಟವಾದ ಸಂದೇಶವನ್ನು ಸಾರಬೇಕಿದೆ. ಇತ್ತೀಚಿನ ದಿನಗಳಲ್ಲಿ, ಮುಸ್ಕಾನ್‌ನ (Muskaan)[i] ನಮ್ಮ ಶಿಕ್ಷಕರು ಮಕ್ಕಳಿಗೆ ಅಡುಗೆ ಮನೆಯ ಅನುಭವಗಳ ಮೂಲಕ ಮತ್ತು ತರಗತಿ ಕೊಠಡಿಯಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಅಡುಗೆ ವಿಧಾನಗಳನ್ನು ಮಾಡಿತೋರಿಸುವ ಮೂಲಕ ಇಂಗ್ಲಿಷ್ ಶಬ್ದಕೋಶವನ್ನು ಕಲಿಸಲು ಆರಂಭಿಸಿದ್ದಾರೆ.

ಅಲಕ್ಷಿತ ಮಕ್ಕಳನ್ನು ಗುರುತಿಸಿದ ಬಳಿಕ, ಸಾಂಪ್ರದಾಯಿಕವಾಗಿ ಅಂತಸ್ತಿನ ಪ್ರಕಾರ ನೀಡಲಾದ ಸವರ್ಣೀಯರು ಅಥವಾ ಬಹುತೇಕ ಶಿಕ್ಷಕರು ಪ್ರತಿನಿಧಿಸುವ ಮೇಲ್ವರ್ಗದವರು ಎಂಬ ಶ್ರೇಣೀಕರಣವನ್ನು ಕೂಡ ಕಡಿಮೆ ಮಾಡಬೇಕಾಗುತ್ತದೆ. ಸರಳವಾದ ಅರ್ಥೈಸುವಿಕೆ ಮತ್ತು ಧೋರಣೆಯೂ ಬದಲಾಗಬೇಕಿದೆ. ಉದಾಹರಣೆಗೆ, ಅಸಮರ್ಥತೆಯ ಸನ್ನಿವೇಶದಲ್ಲಿ ನನಗೆ ಭದ್ರತೆಯ ಭಾವನೆ ತಂದುಕೊಟ್ಟ ಒಂದು ಸನ್ನಿವೇಶ. ನಗರದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ತಲುಪಲು ಪುಡಿಗಾಸೂ ಇಲ್ಲದೆ ದಿಗ್ಮೂಢಳಾದ ಕ್ಷಣ, ಅಥವಾ ದುಡಿಯುವ ವರ್ಗದವರನ್ನೇ ಒಳಗೊಂಡಿರುವ ಮಧ್ಯಮ ವರ್ಗದ ಕುಟುಂಬಗಳಲ್ಲಿ ತುಂಬಾ ಅಥವಾ ಅತ್ಯಧಿಕ ಗಲಾಟೆಗಳು ನಡೆಯುತ್ತವೆ ಎಂದುಕೊಳ್ಳೋಣ. ಇಂತಹ ಸನ್ನಿವೇಶಗಳಲ್ಲಿ, ದೊಡ್ಡ ಮನೆಗಳಲ್ಲಿ ನಡೆಯುವುದು ಅವರ ದೊಡ್ಡದೊಡ್ಡ ಗೋಡೆಗಳನ್ನು ದಾಟಿ ಹೊರಗೆ ಬರುವುದಿಲ್ಲ ಎಂದು ಅವರ ನಂಬಿಕೆ. ಹಾಗಾಗಿ, ನಮ್ಮ ಧೋರಣೆಗಳನ್ನು ನಾವು ಬದಲಾಯಿಸಿಕೊಳ್ಳಬೇಕಿದೆ. ಬಾಹ್ಯ ನೋಟಕ್ಕೆ ಪೂರ್ವನಿರ್ಧರಿತ / ಪೂರ್ವಗ್ರಹಪೀಡಿತ ಕಲ್ಪನೆಗಳಿವೆ. ಒಂದು ವೇಳೆ ಶ್ರೀಮಂತರ ಮನೆಯಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾದರೆ ಅವರು ಎಂದಿನಂತೆ ಶುಭ್ರ ನೋಟದೊಂದಿಗೆ ಸಮಯಕ್ಕೆ ಸರಿಯಾಗಿ ಶಾಲೆಗೆ ಬರಲು ಸಾಧ್ಯವಾಗದೇ ಇರಬಹುದು.

ಮಕ್ಕಳು ತಮ್ಮ ಅನುಭವಗಳನ್ನು ಹಂಚಿಕೊಂಡು ಕೀಳರಿಮೆ ಅನುಭವಿಸುವಾಗ ನಾನು ಈ ಎಲ್ಲಾ ಸಂಗತಿಗಳನ್ನು ಅವರಿಗೆ ಹೇಳುತ್ತೇನೆ. ಸಾಂಪ್ರದಾಯಿಕ ಔಷಧದ ಹೂರಣ ಗೊತ್ತಿಲ್ಲದವರು ಅದನ್ನು ಮೂಢನಂಬಿಕೆ ಮತ್ತು ಹಿಂದುಳಿದ ಔಷಧ ಎಂದೂ, ಅಲೋಪತಿ ಔಷಧ ಪವಾಡ ಮಾಡುವ ಸರ್ವಶ್ರೇಷ್ಠ ಔಷಧ ಎಂದು ಸರ್ವೇಸಾಮಾನ್ಯವಾಗಿ ನಂಬಲಾಗುತ್ತದೆ. ಜ್ಞಾನವು ಕೂಡ ಹೇಗೆ ಮೇಲ್ದರ್ಜೆ ಮತ್ತು ಸಾಮಾಜಿಕ ವರ್ಗಗಳಾಗಿ ವಿಭಜಿಸಿದೆ ಎಂಬುದನ್ನು ಇದು ತೋರಿಸುತ್ತದೆ. ಎಲ್ಲಾ ಜನರಲ್ಲಿ ಸಮಾನತೆ ಎಂಬುದು ನಮ್ಮ ಮಾತುಕತೆಯ ಮೂಲಕವೇ ಬರಬೇಕಾದ ಅಗತ್ಯವಿದೆ.

ಕಲಿಕೆಯ ಗ್ರಹಿಕೆ

ಕಲಿಕೆಯು ಮನುಷ್ಯನ ಬುದ್ಧಿಗೆ ಗುಟುಕು ಅಡ್ರಿನಾಲಿನ್‌ನಂತೆ ಉತ್ತೇಜಕವಾಗಿ ಕೆಲಸ ಮಾಡುತ್ತದೆ. ನಮ್ಮಲ್ಲಿ ಯಾರಿಗಾದರೂ ಏನಾದರೂ ಕಲಿಯಲು ಅವಕಾಶ ಸಿಕ್ಕಿದ್ದು, ಆ ಬಗ್ಗೆ ಪ್ರಜ್ಞಾ–ಪೂರ್ವಕವಾಗಿ ಇದ್ದವರಿಗೆ ನಾನು ಏನು ಹೇಳುತ್ತಿದ್ದೇನೆ ಎಂಬುದು ಅರ್ಥವಾದೀತು. ಒಂದು ಸಂಸ್ಥೆಯಾಗಿ ಶಾಲೆಯು, ಕಲಿಕೆಗಿರುವ ಅವಕಾಶವಾಗಿ ತನ್ನ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳುತ್ತದೆ. ಆದರೂ ಮಕ್ಕಳು ಮಾತ್ರ ಬಹುತೇಕ ಉದಾಸೀನದ ಭಾವವನ್ನು ಅನುಭವಿಸುತ್ತಾರೆ.

ಮಕ್ಕಳು, ಸಹಜವಾಗಿಯೇ ಅಂತರ್ಗತವಾಗಿ ಕ್ರಿಯಾಶೀಲರಾಗಿ, ಜಾಣರಾಗಿ, ಏನನ್ನಾದರೂ ಕಲಿಯಲು ಮುಕ್ತ ಮತ್ತು ನಿರ್ಣಾಯಕರಾಗಿಯೂ ಇರುತ್ತಾರಾದರೂ, ಬಹುತೇಕ ಶಾಲೆಗಳು ಅರ್ಥವತ್ತಾದ ಚರ್ಚೆ ಹಾಗೂ ಕಲಿಕೆಯನ್ನು ಒದಗಿಸುವುದಿಲ್ಲ. ಗಂಟೆಗಟ್ಟಲೆ ಶಾಲಾ ಕೊಠಡಿಯಲ್ಲಿ ಕೂರುವುದು ತ್ರಾಸದಾಯಕವಾಗಿ, ಕಲಿಕೆಯ ಗ್ರಹಿಕೆಯಲ್ಲಿನ ಕೊರತೆಯು ಏನಾಗುತ್ತಿದೆ ಎಂಬುದನ್ನು ಅರ್ಥೈಸಿಕೊಳ್ಳಲಾಗದ ವೈಫಲ್ಯವಾಗಿ ಬಿಡುತ್ತದೆ. ಆದರೆ ಬಹುತೇಕ ಶಾಲಾ ಕೊಠಡಿಗಳಲ್ಲಿ ನಡೆಯುವಂತೆ, ಕಲಿಕೆಯ ಪ್ರಕ್ರಿಯೆಯನ್ನು ಮಕ್ಕಳಿಗೆ ತಲುಪಿಸುವಲ್ಲಿ ಏನೋ ತೊಂದರೆ ಉಂಟಾಗುತ್ತಿದೆ ಎಂಬುದನ್ನು ಸೂಕ್ಷ್ಮಮತಿ ಮಗುವೊಂದು ಅರಿತುಕೊಂಡಿರುತ್ತದೆ. ಮಕ್ಕಳು ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೇ ಮುಖ್ಯ, ಅದರಲ್ಲಿ ಯಾವುದೇ ರಾಜಿ ಇರುವುದಿಲ್ಲ, ಅಂಕಗಳು ಲೆಕ್ಕಕ್ಕಿಲ್ಲ ಎಂಬುದಾಗಿ ಶಿಕ್ಷಕರಾಗಿ ನಾವು ಅರಿತುಕೊಂಡಿದ್ದೇವೆ ಎಂದು ನಾನು ಆಶಿಸಿದ್ದೇನೆ. ಆದರೆ ಕಲಿಕೆಯೇ ಮುಖ್ಯ. ಈ ಕಲಿಕೆಯ ಗ್ರಹಿಕೆಯು ಒಂದು ಕೌಶಲವನ್ನು ಅಥವಾ ಪರಿಕಲ್ಪನೆಯನ್ನು ಕಲಿಯುವುದೋ ಅಥವಾ ಪರಿಕಲ್ಪನೆಯೋ ಅಥವಾ ಹೊಸ ಚಿಂತನೆಯನ್ನು ಪಡೆಯುವುದೋ ಆಗಿರಬಹುದು. ಹಾಗಾಗಿ, ಕಲಿಕೆಯ ಗ್ರಹಿಕೆಯು ಒಂದು ಲೆಕ್ಕವನ್ನು ಬಿಡಿಸುವುದು ಅಥವಾ ಯಾವುದೋ ಒಂದು ಸರಳ ವಿನ್ಯಾಸವನ್ನು ಅರ್ಥೈಸಿಕೊಳ್ಳುವುದು ಅಥವಾ ಅದಕ್ಕಾಗಿ ಒಂದು ಮಾದರಿಯನ್ನು ಸಿದ್ಧಪಡಿಸಿ ಬಿಡಿಸಲು ಕೊಡುವುದು ಅಥವಾ ಇಂಗ್ಲಿಷ್‌ನಲ್ಲಿ ಒಂದು ಪೂರ್ಣ ವಾಕ್ಯವನ್ನೇ ಹೇಳಬಹುದು–ಇವೆಲ್ಲವೂ ಔಪಚಾರಿಕ ಶಾಲೆ ತಮಗಾಗಿ ಇರುವ ಸ್ಥಳ ಎಂಬುದನ್ನು ಅರ್ಥ ಮಾಡಿಕೊಳ್ಳಲು ಮಕ್ಕಳಿಗೆ ನೆರವಾಗುತ್ತದೆ.

ಔಪಚಾರಿಕ ಕಲಿಕಾ ಸ್ಥಳದಲ್ಲಿ ಮಕ್ಕಳನ್ನು ಪುಸ್ತಕ ಮತ್ತು ಕರಿಹಲಗೆಗಷ್ಟೇ ಮೀಸಲಾಗಿಡದೆ ಸಾಮುದಾಯಿಕ ಪ್ರಜ್ಞೆಯನ್ನು ಪರಿಚಯಿಸುವುದರಿಂದ ಹೆಚ್ಚು ಸಹಜ ಮಾರ್ಗದಲ್ಲಿ ಮಕ್ಕಳನ್ನು ಕಲಿಕೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಂತಾಗುತ್ತದೆ. ಬೀಜ ಮೊಳಕೆಯೊಡೆಯುವುದನ್ನು ಗಮನಿಸಿದರೆ, ತಮ್ಮ ಸುತ್ತಮುತ್ತಲ ಮರಗಳ ಬಗ್ಗೆ ತಿಳಿದುಕೊಳ್ಳಲು ನೆರವಾಗುತ್ತದೆ. ಹೀಗೆ ಬದುಕಿನ ಕೆಲವು ವಾಸ್ತವಿಕ ಸಂಗತಿಗಳನ್ನು ಕಲಿಕೆಯ ಸ್ಥಳದಲ್ಲಿ ಮಕ್ಕಳಿಗೆ

ತಿಳಿಸಿಕೊಡಬೇಕು. ಈ ಕಲಿಕೆಗೆ ಸಾಂಪ್ರದಾಯಿಕ ಶಿಕ್ಷಕರು ಸಾಕು ಹೊರತು ಬಿ.ಎಡ್ ಕಲಿತ ಶಿಕ್ಷಕರೇ ಬೇಕೆಂದಿಲ್ಲ. ಈ ವಾಸ್ತವಿಕ ಕಲಿಕೆಯು ನಮ್ಮ ಶಾಲೆಗಳ ಉದ್ದೇಶವಾಗಬೇಕು. ಅಲ್ಲದೆ ಈ ಉದ್ದೇಶವನ್ನು ಮಗುವಿಗೆ ಖಚಿತಪಡಿಸುವುದರೊಂದಿಗೆ, ಔಪಚಾರಿಕ ಕಲಿಕಾ ಸ್ಥಳವು ತನಗಾಗಿ ಇರುವುದು ಹೌದೋ ಅಲ್ಲವೋ ಎಂಬುದನ್ನು ಮಗು ತಾನೇ ಪತ್ತೆ ಮಾಡುತ್ತದೆ.

ಮಾತು ಮತ್ತು ಸಂವಾದ

ಮುಖ್ಯವಾಹಿನಿಯ ಶಾಲೆಗಳಲ್ಲಿ ಇರಬೇಕಾದ ನಿರ್ಣಾಯಕ ಅಂಶಗಳಾದ ಯಥಾಸ್ಥಿತಿಯನ್ನು ಪ್ರಶ್ನಿಸುವ ಅಗತ್ಯ, ಸ್ವಾತಂತ್ರ್ಯ ಮತ್ತು ಪರಿಣಾಮಕಾರಿ ಚಿಂತನೆಯನ್ನು ಹೆಚ್ಚಿಸಬೇಕಾಗಿರುವುದು ಮರೆಯಾಗಿದೆ. ಹಾಗಾಗಿ, ತಮ್ಮೊಳಗಿನ ಮತ್ತು ಸುತ್ತಮುತ್ತ ಜಗತ್ತಿನ ಕುರಿತು ವಿಭಿನ್ನ ಸಂಗತಿಗಳ ಬಗ್ಗೆ ತಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಮತ್ತು ಮಾತನಾಡಲು ಮಕ್ಕಳಿಗೆ ಅವಕಾಶ ಕಲ್ಪಿಸಿಕೊಡುವುದು ನಮಗೆ ಮಹತ್ವದ್ದಾಗಿದೆ. ನಾವು ಕೆಲಸ ಮಾಡುವ ಪರಿಸ್ಥಿತಿಗಳನ್ನು ವಿಶ್ಲೇಷಿಸುವುದರಿಂದ ನಮಗೆಲ್ಲರಿಗೂ ಯೋಚನೆಗೆ ಅವಕಾಶವು ಸಿಗುತ್ತದೆ. ಇದಕ್ಕೆ ಶಿಕ್ಷಕರು ಪ್ರಶ್ನೆಗಳನ್ನು ಕೇಳಿ ಪರಿಹಾರವನ್ನೂ ಸೂಚಿಸಬೇಕಾಗುತ್ತದೆ. ಶಿಕ್ಷಣಶಾಸ್ತ್ರದಲ್ಲೇ ಯಾವುದೇ ಪರಿಕಲ್ಪನೆಗಳನ್ನು ಬಳಸುವ ಮೂಲಕ ಇದನ್ನು ಸಾಧಿಸಬಹುದಾಗಿದ್ದು, ಇದಕ್ಕೆ ತನ್ನದೇ ಆದ ಮೌಲ್ಯವೂ ಇದೆ. ಸಾಮಾಜಿಕ ನಿಯಮಗಳು ಮತ್ತು ವೈಯಕ್ತಿಕ ಜವಾಬ್ದಾರಿಗಳ ಬಗ್ಗೆ ವಾರಕ್ಕೊಂದು ಬಾರಿ ಚರ್ಚಿಸುವುದರಿಂದ, ಕೇವಲ ಅಂಗೀಕಾರ ಮತ್ತು ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವುದಕ್ಕಿಂತಲೂ ಯೋಚಿಸುವ, ಮೌಲ್ಯಮಾಪನ ಮಾಡುವ, ಸಕ್ರಿಯರಾಗಲು ಕಲಿತಂತಾಗುತ್ತದೆ.



ಒಂದು ತರಗತಿಯಲ್ಲಿ ನಾನು ಅಲಕ್ಷಿತ ಸಮುದಾಯದ ಮಕ್ಕಳಿಗೆ ಶಾಲಾ ಶಿಕ್ಷಣ ಯಾಕೆ ಅವಶ್ಯ ಮತ್ತು ಅವರು ಯಾಕೆ ಅದನ್ನು ಕೈಬಿಡಬಾರದು ಎಂಬ ಬಗ್ಗೆ ಚರ್ಚಿಸಿದ್ದನ್ನು ನೆನಪಿಸಿಕೊಳ್ಳುತ್ತೇನೆ. ಮಕ್ಕಳು ಮಹತ್ತರವಾದುದನ್ನು ಸಾಧಿಸುವ ದೃಷ್ಟಿಕೋನದೊಂದಿಗೆ ಸಂವಾದ ಆರಂಭಿಸಿದರು ಹಾಗೂ ಅಲಕ್ಷಿತ ಸಮುದಾಯದವರು ತಮ್ಮ ಘನತೆಯನ್ನು ಮರಳಿ ಗಳಿಸಬೇಕು, ಸವರ್ಣೀಯರ ಮಕ್ಕಳಂತೆ ತಮ್ಮ ಸಮುದಾಯದ ಮಕ್ಕಳ ಸಾಮರ್ಥ್ಯ ಏನು ಎಂಬುದನ್ನು ತೋರಿಸಬೇಕು ಎಂದರು. ಈ ಉಪಾಯವನ್ನೇ ಇಟ್ಟುಕೊಂಡು, ನಮ್ಮಲ್ಲಿ ಪ್ರತಿಯೊಬ್ಬರೂ ವಿಭಿನ್ನರು ಮತ್ತು ಪ್ರತಿಯೊಬ್ಬರೂ ಪರಸ್ಪರರಿಗಾಗಿ ವೈಯಕ್ತಿಕವಾಗಿ ಕೆಲಸ ಮಾಡಬಹುದು, ಆಗ ಶಿಕ್ಷಣದ ಮೂಲಕ ಹೆಚ್ಚಿನ ಆಯ್ಕೆಗಳು ನಮಗೆ ಮುಕ್ತವಾಗುತ್ತವೆ ಎಂದು ಹೇಳಿದೆವು.

ಮಹಿಳೆಯರ ಕೆಲಸ ಮತ್ತು ಅಂತಸ್ತು, ಜಾತಿ ಶ್ರೇಣೀಕರಣ, ಕೋಪ ಮತ್ತು ನೋವಿನ ಭಾವನೆ– ಮಕ್ಕಳು ಇದನ್ನೆಲ್ಲ ಗಮನಿಸುವುದಿಲ್ಲ, ಅರ್ಥ ಮಾಡಿಕೊಳ್ಳುವುದಿಲ್ಲ ಎಂದೇನಲ್ಲ. ಅವರು ಇವನ್ನು ನಿರಂತರವಾಗಿ ಗಮನಿಸುತ್ತಾ ತಮ್ಮದೇ ನಿರ್ಧಾರಕ್ಕೆ ಬಂದು, ತಮ್ಮ ಅಭಿಪ್ರಾಯಗಳನ್ನು ವರ್ತನೆಗಳಾಗಿ ಪರಿವರ್ತಿಸಿ ಅಪ್ರಜ್ಞಾ–ಪೂರ್ವಕವಾಗಿ ತಮ್ಮ ನಡತೆಯಲ್ಲಿ ತೋರಿಸುತ್ತಾರೆ. ನಮಗೆ ನೀತಿ ವಿಜ್ಞಾನ ಪಾಠಗಳಲ್ಲ; ನಿರ್ಣಯಾತೀತವಾದ ಮತ್ತು ಮುಕ್ತವಾದ ಚರ್ಚೆಗಳು ಬೇಕಾಗಿದೆ.

ಅಭಿವ್ಯಕ್ತಿ

ಎಲ್ಲಾ ಮನುಷ್ಯರೂ ಅನುಭವಗಳು, ನೆನಪುಗಳು ಮತ್ತು ಭಾವನೆಗಳ ದೊಡ್ಡ ಕಂತೆ ಉಳ್ಳವರು. ಇವುಗಳಿಂದಲೇ ವ್ಯಕ್ತಿತ್ವ ರೂಪು–ಗೊಳ್ಳುವುದು. ನಮ್ಮ ಬದುಕಿನಲ್ಲಿ ಬಂದುಹೋಗಿ ನಮ್ಮಲ್ಲೇ ನಿಲ್ಲುತ್ತವೆ ಎಂದು ಭಾವನೆಗಳ ಕಂತೆಯಲ್ಲಿ ಅಭಿವ್ಯಕ್ತಿಸುವ ಸಂಗತಿಗಳಲ್ಲ. ಅದು ಸಾವು, ನೋವು, ಹೀಯಾಳಿಕೆ, ಪ್ರೀತಿಯೋ ಏನೂ ಆಗಿರಬಹುದು. ವಯಸ್ಕರಾಗಿ ನಾವು, ಕ್ಷುಲ್ಲಕ ವಿಚಾರಗಳನ್ನು ಅಥವಾ ನಿಂದನೆಯ ಪರಿಭಾಷೆಯನ್ನು ಬಳಸಲು ಹಿಂಜರಿಯುತ್ತೇವೆ. ಆದರೆ ಮಗುವಿನ ಬುದ್ಧಿ ಮತ್ತು ಸ್ಮರಣಶಕ್ತಿಯ ಭಾಗವೇ ಆಗಿರುವ ಕಾರಣ ನಾವು ಇದನ್ನು ಪ್ರಜ್ಞಾಪೂರ್ವಕವಾಗಿ ತರಗತಿಗೆ ತರಲು ಪ್ರಯತ್ನಿಸಬೇಕು. ಈ ವಿಚಾರಗಳನ್ನು ನಾವು ಅವರ ಜೊತೆಗೆ ಸಭ್ಯತೆಯಿಂದ ಮತ್ತು ನಿಂದನೀಯವಲ್ಲದ ರೀತಿಯಲ್ಲಿ ಚರ್ಚಿಸಬೇಕು. ಮಗುವಿನ ಶೈಕ್ಷಣಿಕ ಗುಣಮಟ್ಟ ಅಥವಾ ನಾವು ಬೋಧಿಸುವ ವಿಷಯಕ್ಕೆ ತಕ್ಕಂತೆ ಅಪೇಕ್ಷಿತ ಅಭಿವ್ಯಕ್ತಿಯ ವಿಧಾನವನ್ನು ಬದಲಾಯಿಸಿಕೊಳ್ಳಬಹುದು. ಚಿತ್ರ ಬರೆಯುವುದು, ಬರವಣಿಗೆ, ಮಾತನಾಡುವುದು, ನಟನೆಯಂತಹ ಚಟುವಟಿಕೆಗಳ ಮೂಲಕ ಅಭಿವ್ಯಕ್ತಿಯನ್ನು ಉತ್ತೇಜಿಸಬಹುದು. ಇದನ್ನು ವಿಧಿವತ್ತಾಗಿಲ್ಲದ ರೀತಿಯಲ್ಲಿ, ಅಂದರೆ 'ಕಳೆದ ರಾತ್ರಿ ನೀನೇನು ಮಾಡಿದೆ?, 'ನಿನ್ನ ಭಯ ಏನು?, 'ಹೊಸ ಸ್ನೇಹಿತನನ್ನು ಹೇಗೆ ಮಾಡಿಕೊಂಡೆ? ಎಂಬಂತಹ ಪ್ರಶ್ನೆಗಳನ್ನು ಕೇಳುವ ಮೂಲಕವೂ ಮಾಡಬಹುದು. ಶ್ರೋತೃಗಳೆಂದು ಭಾವಿಸಿದವರಿಗೆ ಚರ್ಚೆ ಮತ್ತು ಪ್ರಕಟಣೆಯಿಂದ ಹಲವು ಬಗೆಯಲ್ಲಿ ನೆರವು ಸಿಗುತ್ತದೆ.

ಶಾಲಾ ಕೊಠಡಿಯಿಂದ ಹೊರಬಂದು ಪರಿಚಿತವಾದುದನ್ನು ಮಾಡುತ್ತಾ

ತರಗತಿಯಿಂದ ಹೊರ ಬಂದು ಅತಿ ಪರಿಚಿತವಾದ ಅಥವಾ ಹೊಸ ಜಾಗದಲ್ಲಿ, ಅವಲೋಕನ, ಚರ್ಚೆ, ಕಲಿಕೆಗಾಗಿ ರೂಪುಗೊಂಡ ಗುಂಪುಗಳಲ್ಲಿ ಕಾಲ್ನಡಿಗೆಯ ಮೂಲಕ ಸಾಗುವುದು ಪ್ರತಿಯೊಬ್ಬರಿಗೂ ಸಾಧ್ಯವಾದ ಸಂಗತಿ. ದುರಾದೃಷ್ಟವಶಾತ್, ಈಗ

ಬಹುತೇಕ ಸಂವಾದಗಳು ಕಂಪ್ಯೂಟರ್ ಅಥವಾ ಫೋನ್‌ಗಳು ವಿವರಿಸಿದಂತೆ ನಡೆಯುತ್ತವೆ. ಆದರೂ, ನಾವು ಅವಕಾಶಗಳನ್ನು ಹುಟ್ಟುಹಾಕಿದರೆ ನಮ್ಮದೇ ರೀತಿಯಲ್ಲಿ ವ್ಯಕ್ತಿಗಳು ಮತ್ತು ಪ್ರಕೃತಿಯನ್ನು ಅರ್ಥ ಮಾಡಿಕೊಳ್ಳಬಹುದು.

ಕೆಲವೊಮ್ಮೆ, ನನ್ನ ತರಗತಿಯ ವಿದ್ಯಾರ್ಥಿನಿಯರನ್ನು ಫೋನ್ ಬಿಲ್ ಪಾವತಿಸಲು ಅಥವಾ ಪತ್ರವನ್ನು ಅಂಚೆಗೆ ಹಾಕಲೆಂದು ಹೊರಗೆ ಕರೆದುಕೊಂಡು ಹೋಗುತ್ತೇನೆ. ಮಕ್ಕಳಿಗೆ ತಮ್ಮ ಶಿಕ್ಷಕಿಯೊಂದಿಗೆ ಸಾರ್ವಜನಿಕವಾಗಿ ಸುತ್ತಾಡುವುದು ಮತ್ತು ಶಿಕ್ಷಕಿಗೆ ಮಕ್ಕಳೊಂದಿಗೆ ಹೊರಗೆ ಸುತ್ತಾಡುವುದು ಹೊಸ ಒಳನೋಟಗಳನ್ನು ತಂದುಕೊಡುತ್ತದೆ. ಮಕ್ಕಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಮತ್ತು ನೆರೆಹೊರೆಯಲ್ಲಿ ನಡೆದಾಡುತ್ತಾ ಅಲ್ಲಿನ ಸಂಗತಿಗಳನ್ನು ಪರಿಚಯಿಸಿಕೊಡುವಂತೆ ಅವರನ್ನು ಕೇಳುವುದರಿಂದ ನಮಗೆ ಹೊಸ ಸಂಗತಿಗಳು ಹಾಗೂ ಒಂದು ಸ್ಥಳದ ಬಗ್ಗೆ ಗ್ರಹಿಸಲು ಸಾಧ್ಯವಾಗುತ್ತದೆ. ಈ ಪ್ರಯತ್ನಕ್ಕೆ ಸಮುದಾಯದ ಹಿರಿಯರಿಂದಲೂ ಉತ್ತೇಜನ ಸಿಗಬಹುದು.

ತಮ್ಮ ಸುತ್ತಲಿನ ವಾಸ್ತವ ಜಗತ್ತನ್ನು ಅರ್ಥ ಮಾಡಿಕೊಂಡಿದ್ದನ್ನು ಮತ್ತು ತಮಗೆ ತಿಳಿದಿದ್ದನ್ನು ಹೇಳಿಕೊಳ್ಳಲು ಹೆಚ್ಚು ಅಧಿಕೃತತೆ ಬರುವುದು ಶಾಲಾ ಕೊಠಡಿಗಿಂತಲೂ ಹೆಚ್ಚಾಗಿ ಕಾಡಿನಲ್ಲೋ, ರಸ್ತೆಬದಿಯಲ್ಲೋ ಎಂಬುದನ್ನು ನಮಗೂ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಕತೆಗಳು ಮತ್ತು ಕತೆ ಪುಸ್ತಕಗಳ ಮೂಲಕ ಸಾಂಸ್ಕೃತಿಕ ಎಲ್ಲೆಗಳನ್ನು ಮೀರುವುದು

ಭಾರತ ಅಥವಾ ಪ್ರಪಂಚದ ಜನರ ವೈವಿಧ್ಯಮಯ ಸಂಸ್ಕೃತಿಯನ್ನು ಅರ್ಥ ಮಾಡಿಕೊಂಡು ತಿಳಿದುಕೊಳ್ಳಲು ಸಹಾಯವಾಗುವ ನಿಟ್ಟಿನಲ್ಲಿ ಬಹುತೇಕ ನಮ್ಮ ಪಠ್ಯಪುಸ್ತಕಗಳಲ್ಲಿ ಆಸಕ್ತಿಕರ ಕಥೆಗಳು ಇಲ್ಲದೆ ಹಿಂದೆ ಬೀಳುತ್ತವೆ. ಯಾಕೆಂದರೆ, ಪಠ್ಯಪುಸ್ತಕಗಳಲ್ಲಿನ 'ಪಾಠಗಳು' ಅವುಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನಷ್ಟೇ ಕಲಿಸಿಕೊಡುತ್ತವೆ ಮತ್ತು ಆಗೊಮ್ಮೆ ಈಗೊಮ್ಮೆ ಮೌಲ್ಯಯುತವಾಗಿ, ಅವಕಾಶಗಳಿರುವ ಮಕ್ಕಳ ಅನುಭವಗಳನ್ನೂ ಪ್ರತಿನಿಧಿಸುವುದಿದೆ. ಹಾಗು ಅವು ಮಧ್ಯಮ ವರ್ಗದವರ ಬಾಲ್ಯದ ಕಲ್ಪನೆಗಳೊಂದಿಗೆ ಮುಖಾಮುಖಿ-ಯಾಗುತ್ತದೆ. ಆದರೆ ಎಲ್ಲೆಡೆ ಅಲಕ್ಷಿತ ಮಕ್ಕಳನ್ನು ಪ್ರತಿನಿಧಿಸುವ ಮತ್ತು ಗೌರವಿಸುವಂತಹ ವೈವಿಧ್ಯಮಯ ಕತೆ ಪುಸ್ತಕಗಳ ಪ್ರಾಮುಖ್ಯತೆ ಮತ್ತು ಪ್ರಸ್ತುತತೆ ಸಂಪೂರ್ಣವಾಗಿ ಕಳೆದು-ಹೋಗಿರುತ್ತದೆ. ದಿನಕ್ಕೊಂದು ಕತೆ ಎಂಬುದು ಶಿಕ್ಷಣತಜ್ಞ ಕೃಷ್ಣಕುಮಾರ್ ಅವರ ಸಲಹೆಯಾಗಿತ್ತು. ನಮ್ಮ ಶಾಲೆಗೆ ಯಾವುದು ಉತ್ತಮ ಎಂಬುದನ್ನು ನಾವೇ ನಿರ್ಧರಿಸಬಹುದು.

ಮಕ್ಕಳ ವಾಸ್ತವಗಳನ್ನು ದೃಢೀಕರಿಸುವ ಕತೆಗಳು ಮತ್ತೊಬ್ಬರ ಬದುಕಿನ ವಾಸ್ತವದೊಳಗೆ ಇಣುಕಿನೋಡಲು ನೆರವಾಗುವ ಕಾರಣ ಬಹಳ ಮಹತ್ವಪೂರ್ಣ. ಯಾರ ಮೇಲಾದರೂ ಸಾಮೂಹಿಕ ಹಲ್ಲೆ ಅಥವಾ ಹಕ್ಕುಗಳ ಉಲ್ಲಂಘನೆಯ ಘಟನೆಯಲ್ಲಿ ಒಂದು ಮಗು ಗಾಯಗೊಂಡಿದ್ದಕ್ಕೆ ಸಂಬಂಧಿಸಿದ ಕತೆಯನ್ನು ಕೈಗೆತ್ತಿಕೊಂಡಾಗ ಓದುಗನಿಗೆ ಆ ವ್ಯಕ್ತಿಯನ್ನಷ್ಟೇ ಅರ್ಥ ಮಾಡಿಕೊಡಲಾಗುತ್ತದೆ. ಎಂಟು ವರ್ಷದ ಒಂದು ಮಗು ಪಾಕಿಸ್ತಾನದ ವಿರುದ್ಧ ಮಾತನಾಡುವುದನ್ನು ಕೇಳಿದಾಗಲೆಲ್ಲ (ಸಂವಾದಗಳಲ್ಲಿ, ಮಕ್ಕಳು ಆ ದೇಶದ ಬಗ್ಗೆ ವೈರತ್ವವನ್ನು ಮತ್ತು 'ಪಶ್ಚಿಮದ ಶತ್ರು' ಎಂಬುದನ್ನು ಹೇಳುತ್ತಿರುತ್ತಾರೆ) ಈ ವೈರತ್ವ ಇನ್ನಷ್ಟು ಬೇರೂರೀತೇ ಅಥವಾ ದ್ವೇಷ ಬಿತ್ತುವ ಮತ್ತು ತಿರುಚಿದ ಇತಿಹಾಸದ ಪಾಠಗಳನ್ನು ಓದುವ ಬದಲು ಇವರು ಗಡಿಭಾಗದ ಮಕ್ಕಳ ಬದುಕಿನ ಕತೆಗಳನ್ನು ಓದಿದ್ದರೆ ಈ ಭಾವನೆ ಬಗೆಹರಿಯುತ್ತಿತ್ತೇ ಎಂದುಕೊಳ್ಳುತ್ತೇವೆ. ಮುಸ್ಕಾನ್‌ನ ಗ್ರಂಥಾಲಯಗಳಲ್ಲಿ ನಾವು ವೈವಿಧ್ಯಮಯ ವಾಸ್ತವದ ಕತೆಗಳನ್ನು ವಿವರಿಸುವ ಪುಸ್ತಕಗಳನ್ನು ತಂದಿರಿಸಿದ್ದು, ನಮ್ಮ ಮಕ್ಕಳ ವಾಸ್ತವ ಸಂಗತಿಗಳನ್ನು ವಿವರಿಸುವ ಪುಸ್ತಕಗಳನ್ನಷ್ಟೇ ಪ್ರಜ್ಞಾಪೂರ್ವಕವಾಗಿ ಪ್ರಕಟಿಸಿದ್ದೇವೆ.

ವಿವಿಧ ಭಾವನಾತ್ಮಕ ಅವಶ್ಯಕತೆಗಳನ್ನು ಗುರುತಿಸುವುದು

ಅಲಕ್ಷಿತ ಸಮುದಾಯದ ಮಕ್ಕಳಿಗೆ 12 ವರ್ಷಗಳ ಶಾಲಾ ಶಿಕ್ಷಣ ಪಡೆಯುವುದೆಂದರೆ ಪ್ರಯಾಸದ ಕೆಲಸ ಎಂಬುದನ್ನು ನಾವು ನೋಡಬಹುದು. ಹುಟ್ಟುತ್ತಲೇ ಭವಿಷ್ಯದ ಹಾದಿ ನಿರ್ಧರಿತ-ಗೊಂಡಿರುವ ಸವಲತ್ತುಳ್ಳ ಮಗು ಶಿಕ್ಷಣಕ್ಕೆ ಹಾಕುವ ಶ್ರಮಕ್ಕೆ ಹೋಲಿಸಿದರೆ ಅಲಕ್ಷಿತ ಮಕ್ಕಳು ಕನಿಷ್ಠ ಪಕ್ಷ 50 ಪಟ್ಟು ಹೆಚ್ಚು ಶ್ರಮ ಹಾಕಬೇಕಾಗುತ್ತದೆ. ದೃಢನಿಶ್ಚಯ ಮಾಡುವ ಮಗು ಎಲ್ಲಾ ಎಡರುತೊಡರುಗಳನ್ನು ದಾಟಬಲ್ಲದು ಎಂಬುದರ ಬಗ್ಗೆ ನಾವು ಆಗಾಗ್ಗೆ ಕೇಳುತ್ತಿರುತ್ತೇವೆ. ಆದರೆ ಅಲ್ಲಿ ಪರೀಕ್ಷೆಗೊಳಪಡುವುದು ನಮ್ಮ ದೃಢನಿಶ್ಚಯ ಮತ್ತು ನಮ್ಯತೆಯೇ ಹೊರತು ಮಗುವಿನದ್ದಲ್ಲ.

ಕಲಿಕೆಯಲ್ಲಿ ಶಿಕ್ಷಕರ ಪಾತ್ರ

ಕೆಲವೊಂದು ಸಮಸ್ಯಾತ್ಮಕ ಪರಿಸ್ಥಿತಿಗಳನ್ನು ಮೇಲಿನ ಪ್ರಯತ್ನಗಳ ಮೂಲಕ ಬಗೆಹರಿಸಬಹುದು, ಮಗು ಶಾಲೆಯಲ್ಲಿ ಮುಂದುವರಿಯಲಾಗದೇ ಇರುವುದಕ್ಕೆ ನಮ್ಮ ಶ್ರಮದಲ್ಲಿನ ಕೊರತೆ ಮತ್ತು ಸೂಕ್ಷ್ಮತೆ ಕಳೆದುಕೊಂಡಿರುವುದೂ ಕಾರಣವಾಗಬಹುದು. ಶಿಕ್ಷಕರೊಂದಿಗೆ ಭಾವನಾತ್ಮಕ ನಂಟು ಮತ್ತು ನಂಬಿಕೆ ಬಹುತೇಕ ಮಕ್ಕಳಿಗೆ ಬಹಳ ಮುಖ್ಯವೆನಿಸಿದರೆ, ಇನ್ನು ಕೆಲವರಿಗೆ ಅದೇ ಕಗ್ಗಂಟಾಗುವುದೂ ಉಂಟು. ಅಂತಹ ಮಕ್ಕಳನ್ನು ಈ ಕೆಲವು ಲಕ್ಷಣಗಳಿಂದ ಗುರುತಿಸಬಹುದು: ಅಂತಹವರು ತರಗತಿಯಲ್ಲಿ ಇತರರೊಂದಿಗೆ ಬೆರೆಯುವುದಿಲ್ಲ; ಚರ್ಚೆಯಲ್ಲಿ ಭಾಗಿಯಾಗುವುದನ್ನು ತಪ್ಪಿಸಬಹುದು; ಮನೆಯಲ್ಲಿ ಕಷ್ಟಕರ ವಾತಾವರಣ ಇರಬಹುದು ಅಥವಾ ತರಗತಿಯಲ್ಲಿನ ಬಹುಸಂಖ್ಯಾತ ಗುಂಪಿನಿಂದ ದೂರವುಳಿಯಬಹುದು.

ಇದು ವೈಯಕ್ತಿಕ ನಿರೀಕ್ಷೆ ಮತ್ತು ಒಂದಷ್ಟು ಕಠಿಣ ಪರಿಶ್ರಮದಿಂದ ಕೂಡಿದ್ದರೂ, ಶಿಕ್ಷಕರಾಗಬೇಕೆಂದು ವೃತ್ತಿಯನ್ನು ಆಯ್ಕೆ ಮಾಡಿಕೊಂಡವರಿಗೆ, ವಿಶೇಷವಾಗಿ ಅವಕಾಶ ವಂಚಿತ, ಆಪ್ತ ಸಲಹೆಗಾರರಿಲ್ಲದ ಅಥವಾ ತಾಯಿಗೆ ಕೆಲಸ ಬಿಟ್ಟೋ ಹೆರಿಗೆ ರಜೆ ಹಾಕಿಯೋ ಅವರ ಕಾಳಜಿ ಮಾಡುವಷ್ಟು ಅಥವಾ ರಜಾ ದಿನಗಳಲ್ಲಿ ಕುಟುಂಬದೊಂದಿಗೆ ಸಂತಸದ ಸಮಯ ಕಳೆಯಲು ಅವಕಾಶವಿಲ್ಲದ ಕುಟುಂಬದ ಮಕ್ಕಳ ಶಿಕ್ಷಕರಿಗೆ ಇದು ಕರ್ತವ್ಯದ ಭಾಗವೆಂದು ಇದನ್ನು ನಾನು ಗಮನಿಸುತ್ತೇನೆ. ಮಕ್ಕಳು ಪ್ರೀತಿಯಿಂದ ವಂಚಿತರಾಗಿದ್ದಾರೆ ಎಂದು ನಾನು ಹೇಳುತ್ತಿಲ್ಲ. ಆದರೆ ಹೊಸ ಮತ್ತು ಕಠಿಣವಾದ ದಾರಿಯ ಆಯ್ಕೆ ಮಾಡಿಕೊಂಡಾಗ ಬೇಕಾಗುವ ಭಾವನಾತ್ಮಕ ಬಲವನ್ನು ನೀಡುವಲ್ಲಿ ವಿಫಲವಾಗುವ ಪ್ರವೃತ್ತಿಯನ್ನು ದುರ್ಬಲ ಕುಟುಂಬಗಳಲ್ಲಿ ಸಾಮಾನ್ಯವಾಗಿ ಕಾಣಬಹುದು. ಈ ಕುಟುಂಬಗಳಿಗೆ ಮತ್ತು ಸಮುದಾಯಗಳಿಗೆ ಔಪಚಾರಿಕ ಶಿಕ್ಷಣ ಎಂಬುದು ಅಪರಿಚಿತ ದಾರಿ. ಒಂದು ವೇಳೆ, ಇಂತಹ ಅವಕಾಶ ವಂಚಿತ ಮಕ್ಕಳಿಗಾಗಿ ಕೆಲಸ ಮಾಡುವುದನ್ನು ನಾನು ಆರಿಸಿಕೊಂಡರೂ ಆ ಮಕ್ಕಳಿಗೆ ನನ್ನ ನೆರವು ಬೇಕು ಎಂಬುದನ್ನು ನಾನು ತೋರಿಸಿಕೊಡಲು ಬಯಸುತ್ತೇನೆ.

ನಿಜ ಜೀವನದ ಕತೆಗಳು

ಓರ್ಝಾ ಗೊಂಡರ ಮಗು ಧರ್ಮೇಂದ್ರನಿಗೆ ಆರು ಮಂದಿ ಒಡಹುಟ್ಟಿದವರು. ತಾಯಿ ಅವರನ್ನು ಕಾಳಜಿಯಿಂದ ಕಂಡರೂ, ಅವರು ರಸ್ತೆ ಬದಿಯಲ್ಲಿ ಬದುಕು ಸಾಗಿಸುವವರು ಮತ್ತು ಆಕೆಯ ಬದುಕೂ, ಮೂಲ ಆದಿವಾಸಿ ಬೇರುಗಳಿಂದ ಬೇರ್ಪಟ್ಟಂತೆ ಇರುವುದನ್ನು ಯಾರು ಬೇಕಾದರೂ ಊಹಿಸಬಹುದು. ಧರ್ಮೇಂದ್ರ, ಎಂಟನೇ ತರಗತಿಯವರೆಗೂ ಕಷ್ಟಪಟ್ಟು ಓದಿದ. ಆದರೆ ಆಮೇಲೆ ತನ್ನ ಕುಟುಂಬದ ಏಕೈಕ ಆದಾಯ ಮೂಲವಾದ, ರಸ್ತೆಯಲ್ಲಿ ಚಿಂದಿ ಆಯುವ ಕೆಲಸಕ್ಕಿಳಿದ. ನಾನೊಂದು ವೇಳೆ ಅವನ ತಾಯಿಯ ತಂಗಿಯಾಗಿ ಚಿಕ್ಕಮ್ಮ ಆಗಿದ್ದಿದ್ದರೆ ಅವನ ಜೀವನ ಬೇರೆಯೇ ಗತಿಯಲ್ಲಿರುತ್ತಿತ್ತು ಎಂದು ನಂಬುತ್ತೇನೆ. ಆದರೆ ನಾನು ಹೆಚ್ಚೆಂದರೆ ಅವನ ಬಗ್ಗೆ ಅನುಕಂಪ ವ್ಯಕ್ತಪಡಿಸುವ ಶಿಕ್ಷಕಿಯಷ್ಟೇ ಆಗಿದ್ದೆ.


ಅಂಜಲಿ ಎಂಬ ಪಾರ್ಧಿ ಬುಡಕಟ್ಟು ಕುಟುಂಬದ ಹುಡುಗಿಯ ಕತೆಯೂ ಇದುವೇ. ಅವಳು ಯಾವಾಗಲೂ ಮನೆಯಿಂದ ಓಡಿಹೋಗುತ್ತಿದ್ದಳು. ಅವಳಿಗೆ ತನ್ನದೇ ಆದ ರೀತಿಯಲ್ಲಿ ಬದುಕಬೇಕೆಂಬ ಆಸೆ. ಆದರೆ ಅವಳಿಗಿದ್ದ ವಿಚಿತ್ರ ಕಾಯಿಲೆಯಿಂದಾಗಿ ಎಂಟನೇ ವರ್ಷದಲ್ಲೇ ಅಸುನೀಗಿದಳು. ನಾನು ಒಬ್ಬ ವಯಸ್ಕಳಾಗಿ ಯೋಚಿಸುವುದಾದರೆ, ನಾನು ಅಲ್ಲಿ ಇದ್ದೆನಾದರೂ ಅವಳಿಗೆ ಅವಶ್ಯವಿದ್ದಷ್ಟು ಮಟ್ಟಿಗೆ ಅಲ್ಲ. ಮಕ್ಕಳ ಅವಶ್ಯಕತೆಗಳು ಮತ್ತು ವ್ಯಕ್ತಿತ್ವ ಒಂದೇ ರೀತಿ ಇರುವುದಿಲ್ಲ. ಕೆಲವರಿಗೆ ಹೆಚ್ಚು ಮತ್ತು ಇನ್ನು ಕೆಲವರಿಗೆ ಕಡಿಮೆ ಗಮನದ ಅವಶ್ಯಕತೆಯಿರುತ್ತದೆ. ವಯಸ್ಕರಾಗಿ, ನಾವು ನಮ್ಮ ಬದುಕಿನಲ್ಲಿ ಹುಟ್ಟಿನಿಂದಲ್ಲದೆ ನಮ್ಮದೇ ಆಯ್ಕೆಯ ಮೂಲಕ ಬರುವ / ತರುವ ಮಕ್ಕಳಿಗಾಗಿ ಜಾಸ್ತಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ.

ಅಲಕ್ಷಿತ ಸಮುದಾಯದ ಭಾಗವಾಗಿದ್ದುಕೊಂಡು, ನಿರ್ಲಕ್ಷಿತ ಸ್ಥಿತಿಯಲ್ಲಿ ಮತ್ತು/ ಅಥವಾ ತಾರತಮ್ಯದ ಬದುಕನ್ನು ಅನುಭವಿಸುತ್ತಿರುವುದು ಕಲಿಕೆಗೆ ಎದುರಾಗುವ ನಿಜವಾದ ತೊಡಕುಗಳು ಆಗಬಹುದು. ಉನ್ನತ ಶಿಕ್ಷಣ ಸಂಸ್ಥೆಗೆ ಕಾಲಿಡುವುದಕ್ಕೂ ಮೊದಲು 12 ವರ್ಷಗಳ ಶಾಲಾ ಕಲಿಕೆ, ಮೂರು ವರ್ಷ ಅಥವಾ ಹೆಚ್ಚಿನ ಅವಧಿಯ ಪದವಿ ಶಿಕ್ಷಣದವರೆಗೆ ಹೆಣಗಾಡುವುದೆಂದರೆ ಸಾಂಸ್ಥಿಕವಾಗಿ ತಾರತಮ್ಯ ಅನುಭವಿಸುವ ಅಲಕ್ಷಿತ ಮಕ್ಕಳಿಗೆ ನಿರಂತರ ಪರೀಕ್ಷೆಯಾಗಿ ಪರಿಣಮಿಸುತ್ತದೆ. ಇದನ್ನು ಗಮನಿಸಿದಾಗ, ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ತಾರತಮ್ಯದ ಬಗ್ಗೆ ಎಷ್ಟು ತುರ್ತಾಗಿ ಗಮನ ಹರಿಸಬೇಕು ಎಂಬುದು ಅರಿವಾಗುತ್ತದೆ.

ಪ್ರಾಥಮಿಕ ಶಾಲಾ ಶಿಕ್ಷಕಿಯರು ಮಾಡುವಂತೆ, ನಮ್ಮ ವರ್ತನೆ ಮಕ್ಕಳನ್ನು ಶಾಲೆಯಿಂದ ಹೊರಗಾದರೂ ಎಳೆಯಬಹುದು, ಒಳಗಾದರೂ ಕಳುಹಿಸಬಹುದಾಗಿದ್ದು, ನಾವು ಬದಲಾವಣೆ ಬಗ್ಗೆ ಪ್ರಜ್ಞೆ ಇಟ್ಟುಕೊಳ್ಳಬೇಕು ಅಷ್ಟೇ. ಶಾಲೆಗಳು ಮತ್ತು ಕಲಿಕೆಯ ಸ್ಥಳಗಳು ತಟಸ್ಥವಾಗಿವೆ, ಪ್ರತ್ಯೇಕಿಸಲ್ಪಟ್ಟಿವೆ, ಅವುಗಳು ಮೆರಿಟ್‌ಗಷ್ಟೇ ಮಹತ್ವ ನೀಡಿ ಜಾತಿ ಮತ್ತು ವರ್ಗದ ಬಗ್ಗೆ ಪ್ರಜ್ಞಾಶೂನ್ಯವಾಗಿವೆ, ತಾವು ಇರುವ ಸಮಾಜೋ ಸಾಂಸ್ಕೃತಿಕ ಚೌಕಟ್ಟನ್ನು ಸಕ್ರಿಯವಾಗಿ ಪ್ರತಿಬಿಂಬಿಸುತ್ತವೆ, ಶಾಲಾ ಶಿಕ್ಷಣ ಕ್ರಮದ ಪ್ರಸ್ತುತತೆಯನ್ನೇ ಪ್ರಶ್ನಿಸುವಂತೆ ಮಾಡಿವೆ. ಇಂಥ ಯೋಚನೆಗಳನ್ನು ಹೊರಗಿಟ್ಟರೆ ಮತ್ತು ವೈವಿಧ್ಯಮಯ ವಾಸ್ತವಗಳನ್ನು ಒಳಗೊಂಡಂತಹ ಪ್ರಜಾಸತ್ತಾತ್ಮಕವಾದ ವಿವಿಧ ದೃಷ್ಟಿಕೋನಗಳನ್ನು ಅಳವಡಿಸಿ–ಕೊಂಡರೆ ಪ್ರತಿ ಮಗುವಿನ ಕಲಿಕೆಯನ್ನು ಪ್ರೋತ್ಸಾಹಿಸಿದಂತೆ ಆಗುತ್ತದೆ.



ಏಕಾಂಗಿಯಾಗಿ ಶಾಲೆಗೆ ಹೋಗುತ್ತಿರುವ ಮಗು; ಕೃತಿಕರ್ತೃ– ಸಿಮ್ರನ್ ಉಯಿಕೆ, ಇಲಸ್ಟ್ರೇಟರ್: ಕೃತಿಕಾ ಸೂಸರ್ಲಾ; ಮುಸ್ಕಾನ್ (2019)



ಮುನ್ನು: ಕಾಶ್ಮೀರದ ಒಬ್ಬ ಬಾಲಕ; ಗ್ರಾಫಿಕ್ ಕಾದಂಬರಿ – ಮಲಿಕ್ ಸಾಜದ್; ಫೋರ್ತ್ ಎಸ್ಟೇಟ್) (2025)

[i] ಮುಸ್ಕಾನ್ ಎಂಬುದು ಲಾಭರಹಿತ, ಸರ್ಕಾರೇತರ ಸಂಸ್ಥೆಯಾಗಿದ್ದು, ಮಧ್ಯಪ್ರದೇಶದ ಭೋಪಾಲ್‌ನ ಬಸ್ತಿಗಳಲ್ಲಿ ಜೀವಿಸುತ್ತಿರುವ ಅಲಕ್ಷಿತ ಸಮುದಾಯಗಳೊಂದಿಗೆ ಕೆಲಸ ಮಾಡುತ್ತದೆ.



ಶಿವಾನಿ ತನೇಜಾ ಅವರು ಮುಸ್ಕಾನ್ ಸಂಘಟನೆಯ ಮೂಲಕ 1997ರಿಂದ ಪಟ್ಟಣ ಪ್ರದೇಶಗಳಲ್ಲಿ ಬದುಕುತ್ತಿರುವ ಅಲಕ್ಷಿತ ಸಮುದಾಯ ಮತ್ತು ಮಕ್ಕಳಿಗಾಗಿ ದುಡಿಯುತ್ತಿದ್ದಾರೆ. ಮಕ್ಕಳ ಬದುಕು ಮತ್ತು ವಾಸ್ತವಗಳಿಂದ ಶಿಕ್ಷಣವು ಹೊರತಾದುದಲ್ಲ ಎಂದು ಮುಸ್ಕಾನ್ ಬಲವಾಗಿ ನಂಬುತ್ತದೆ. ಮಕ್ಕಳೊಂದಿಗೆ ನಡೆಸುವ ಚರ್ಚೆಯಿಂದ ಅವರಿಗೆ ತರಗತಿಯಲ್ಲಿನ ಕೆಲಸಗಳಿಗೂ, ಡಿನೋಟಿಫೈ ಆಗಿರುವ ಬುಡಕಟ್ಟುಗಳ ಬಗ್ಗೆ ತಿಳಿದುಕೊಳ್ಳಲೂ ಮಾರ್ಗದರ್ಶನ ನೀಡಿದಂತಾಗಿದೆ. ಲೈಂಗಿಕ ದೌರ್ಜನ್ಯಗಳಿಗೆ ಸಂಬಂಧಿಸಿ ಸ್ಪಂದಿಸುವ ಮಹಿಳೆಯರ ಗುಂಪಿನಲ್ಲಿ ಅವರು ಸ್ವಯಂಸೇವಕಿಯೂ ಆಗಿದ್ದು, ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದ ಪ್ರತಿನಿಧಿಯೂ ಆಗಿದ್ದಾರೆ. ಶಿವಾನಿ ತನೇಜಾ ಅವರ ಸಂಪರ್ಕಕ್ಕೆ: muskaan.office@gmail.com

---

ಅನುವಾದ: **ರೋಹಿಣಿ ಮುಂಡಾಜೆ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**